ದಿನಾಂಕ: 14.01.2022 ರಂದು ಮಧ್ಯಾಹ್ನ 3.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 100 ರಲ್ಲಿ ಶ್ರೀ ದೃವರಾಜ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ದೃವರಾಜ್ ನೋಡಲ್ ಅಧಿಕಾರಿಗಳು
2. ಶ್ರೀ ಸುಭಾಸ್‌ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 100
3. ಶ್ರೀಮತಿ ಸಂಧ್ಯಾ, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ರಾಜಣ್ಣ, ಎ.ಎಸ್.ಐ. ಇನ್ಸ್‌ಪೆಕ್ಟರ್,
5. ಶ್ರೀ ರಘು, ಆರೋಗ್ಯ ಪರಿವೀಕ್ಷಕರು
6. ಶ್ರೀ ಚನ್ನಕೇಶವ, ಮಾರ್ಷಲ್
7. ಶ್ರೀ ಮಲ್ಲೇಶ್, ಕಂದಾಯ ನಿರೀಕ್ಷಕರು
8. ಶ್ರೀ ಕಿರಣ್.ಎಂ.ಎಲ್. ಸದಸ್ಯರು
9. ಶ್ರೀ ಗಿರೀಶ್, ಸದಸ್ಯರು

ದಿನಾಂಕ: 14.01.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 100 ಬಸವೇಶ್ವರನಗರ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ರವರು ಆರ್ಟಿಕಲ್ಚರ್ ಮತ್ತು ಬೀದಿ ದೀಪದ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಾಗದೆ ಇರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಈಗಾಗಲೇ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಮಾತನಾಡಿ ಬೀದಿ ದೀಪಗಳ ಸಮಸ್ಯೆ ಬಗೆ ಹರಿಸಲು ಸೂಚಿಸಿರುತ್ತೇನೆ ಎಂದು ತಿಳಿಸಿದರು.
2. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ಮತ್ತು ಕಿರಣ ರವರು ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ. ಚರ್ಚಿಸಿದರು. ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರು ಕಂದಾಯ ಇಲಾಖೆಯಿಂದ ಕಡತವು ನಮ್ಮ ಇಲಾಖೆಗೆ ಬಂದಿದ್ದು, ಅನುಮೋದನೆಗಾಗಿ ಮಾನ್ಯ ಜಂಟಿ ಆಯುಕ್ತರು [ಪಶ್ಚಿಮ] ರವರ ಕಛೇರಿಗೆ ಕಾರ್ಯಪಾಲಕ ಅಭಿಯಂತರರ [ರಾಜಾಜಿನಗರ] ವಿಭಾಗ ರವರ ಮುಖೇನಾ ಕಳುಹಿಸಲಾಗುವುದು ಎಂದು ತಿಳಿಸಿದರು.
3. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ಮತ್ತು ಕಿರಣ ರವರು ವಿಶ್ವೇಶ್ವರಯ್ಯ ಉಧ್ಯಾನವನದಲ್ಲಿ ಸೊಳ್ಳೆಗಳ ಕಾಟ ಜಾಸ್ತಿಯಾಗಿದ್ದು, ಇದಕ್ಕೆ ಸೊಳ್ಳೆ ಔಷಧಿಯನ್ನು ಸಿಂಪಡಿಸುವಂತೆ ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಗಿ ಶ್ರೀಮತಿ ಸಂಧ್ಯಾ ರವರು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಯಲಿ ತಿಳಿಸಿದರು.
4. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ಮತ್ತು ಕಿರಣ ರವರು ಮುಂದಿನ ಸಭೆಗೆ ಆರ್ಟಿಕಲ್ಚರ್ ಮತ್ತು ಬೀದಿ ದೀಪ , ಬೆಸ್ಕಾಂ ಮತ್ತು ಜಲ ಮಂಡಳಿ ಅಧಿಕಾರಿಗಳಿಗೆ ಸಭೆಗೆ ಹಾಜರಾಗುವಂತೆ ತಿಳಿಸಲು ಕೋರಿದರು .
5. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ಮತ್ತು ಕಿರಣ ರವರು 11ನೇ ಮುಖ್ಯ ರಸ್ತೆಯಲ್ಲಿರುವ ನಾಯಕ್ ಸಮುಧಾಯ ಭವನದ ಮುಂದೆ ಇರುವ ಡೆಬ್ರಿಸನ್ನು ತೆರವುಗೊಳಿಸುವಂತೆ ನೋಟಿಸ್ ನೀಡಲು ತಿಳಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.
6. ವಾರ್ಡಿನ ಸದಸ್ಯರು ವಾರ್ಡ್ ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿ ಕೇಬಲ್‌ಗಳು ನೇತಾಡುತ್ತಿದ್ದು, ಅದನ್ನು ತೆರವುಗೊಳಿಸುವಂತೆ ಸಭೆಗೆ ಕೋರಿದರು. ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
7. ಜಿಯೋ ಕೇಬಲ್ ಅಳವಡಿಸಲು ರಸ್ತೆಯನ್ನು ಕತ್ತರಿಸಿ, ಸರಿಯಾಗಿ ಗುಂಡಿಗಳನ್ನು ಮುಚ್ಚದೇ ಇರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ವಾರ್ಡ್ ಕಮಿಟಿ ಸದಸ್ಯರು ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಗುತ್ತಿಗೆದಾರರನ್ನು ಕರೆಸಿ ಸರಿಯಾಗಿ ಗುಂಡಿಗಳನ್ನು ಮುಚ್ಚುವಂತೆ ತಿಳಿಸಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 100